ಕಥೆ

# ಆಗಂತುಕನೊಂದಿಗೆ...



**ನಾಗ ಎಚ್. ಹುಬ್ಳಿ**

ಕಲೆ: ವಿಶ್ವನಾಥ್ ಎ.ಎಸ್.

ಬಾಲ್ಯದಿಂದಲೂ ನನಗೊಂದು ಅಭ್ಯಾಸ. ಯಾವುದೇ ಪತ್ರಿಕೆಯನ್ನು ಕೈಗೆತ್ತಿಕೊಂಡರೂ ಅದರಲ್ಲಿರುವ 'ಭವಿಷ್ಯ'ವನ್ನು ನೋಡುವುದು. ಅದರಲ್ಲಿ ಪ್ರಕಟವಾಗುವುದೆಲ್ಲಾ ಸರಿಯೆನ್ನುವುದು ನನ್ನ ಅಭಿಪ್ರಾಯ ಅಲ್ಲವೇ ಅಲ್ಲ. ಆದರೆ ಯಾವತ್ತಾದರೂ ಅದರಲ್ಲಿ ನನ್ನ ರಾಶಿಗೆ 'ಶುಭ' ಎಂದು ಕಾಣಿಸಿದರೆ ನನಗೇ ಅರಿವಿಲ್ಲದೇ ಸಂತೋಷವನ್ನು ಅನುಭವಿಸುತ್ತಿದ್ದೆ! ಆ ದಿನ ನೋಡಿದ ಪತ್ರಿಕೆಯಲ್ಲಂತೂ ನನ್ನ ರಾಶಿಯ ಮುಂದೆ, 'ಶುಭ', 'ಲಾಭ', 'ಅಮೃತ ಯೋಗ', 'ಶುಭಪ್ರಯಾಣ', 'ಧನಾಗಮ', 'ಸನ್ಮಾನ', 'ಮಿತ್ರಲಾಭ' ಇತ್ಯಾದಿ ಹಲವಾರು 'ಅದೃಷ್ಟ' ಒಲಿಯಲಿದೆಯೆಂದು ಪ್ರಕಟಿಸಲಾಗಿತ್ತು. ಒಂದು ಯೋಗ ಬಂದರೇ ಸಂತೋಷವನ್ನು ತಡೆದುಕೊಳ್ಳುವುದು ಸಾಧ್ಯವಿಲ್ಲ. ಇನ್ನು ಇಷ್ಟೆಲ್ಲಾ ಅದೃಷ್ಟಗಳು ಒಟ್ಟೊಟ್ಟಾಗಿ ಬಂದುಬಿಟ್ಟರೆ!?

ನಾಲ್ಕು ದಿನಗಳ ನಂತರ 'ರಾಶಿಫಲ' ನನಗೆ ಯಾವ ರೀತಿಯ 'ಫಲ'ವನ್ನು ಕೊಡುತ್ತದೆ ಎನ್ನುವುದನ್ನು ಹೇಗೆ ಊಹಿಸುವುದು! ಹಾಗಾಗಿ ನಾಲ್ಕು ದಿನಗಳ ನಂತರ ಹೋಗಬೇಕಾಗಿದ್ದ ಪಾಟ್ನಾಗೆ ಇಂದೇ ಹೋಗಿಬಿಡುವುದು ಒಳ್ಳೆಯದು ಎನ್ನುವ ತೀರ್ಮಾನಕ್ಕೆ ಬಂದೆ. ಕೂಡಲೇ ಬಟ್ಟೆ-ಬರೆಗಳನ್ನು ಚೀಲಕ್ಕೆ ತುಂಬಿಕೊಂಡು ರೈಲ್ವೆ ನಿಲ್ದಾಣದ ಕಡೆಗೆ ಹೊರಟೆ.

ಅದೃಷ್ಟವೆಂದರೆ ಇದೇ ಇರಬೇಕು. ಮನೆಯಿಂದ ಹೊರಬೀಳುತ್ತಿದ್ದಂತೆಯೇ ಆಟೋದವನು ಪ್ರತ್ಯಕ್ಷನಾದ. ಹತ್ತಿ ಕುಳಿತೆ. ರಾಂಚಿ ರೈಲ್ವೆ ನಿಲ್ದಾಣದ ಪ್ರವೇಶದ್ವಾರದ ಬಳಿಗೆ ಬರುತ್ತಿದ್ದಂತೆಯೇ 'ಪಾಟ್ನಾ ಜಾನೇವಾಲೇ...' ಎನ್ನುವ ಪ್ರಕಟಣೆ ಕೇಳಿಬರತೊಡಗಿತ್ತು. ಆಟೋದವನಿಗೆ ಹಣವನ್ನು ಕೊಟ್ಟು ನಿಲ್ದಾಣದ ಒಳಕ್ಕೆ ಓಡುವ ನಡಿಗೆಯಲ್ಲಿ ಹೆಜ್ಜೆ ಹಾಕಿದೆ. ಐದೇ ಐದು ನಿಮಿಷಗಳ ಒಳಗೆ ನಾನು ವಾರಾಣಸಿಗೆ ಹೋಗುವ ರೈಲಿನ ಬೋಗಿಯೊಳಗೆ ಕುಳಿತಿದ್ದೆ.

ರೈಲಿನೊಳಗೆ ಕುಳಿತುಕೊಳ್ಳುತ್ತಿದ್ದಂತೆಯೇ 'ಇಂದಿನ ರಾಶಿಫಲ'ದಲ್ಲಿ ಓದಿದ ಒಂದೊಂದೇ 'ಲಾಭ'ಗಳ ಬಗ್ಗೆ ಲೆಕ್ಕಹಾಕತೊಡಗಿದೆ. ಮನಸ್ಸು ಸಂಭ್ರಮದಿಂದ ಗರಿಗೆದರಿತು. ಈ ದಿನ ನಡೆಯಲಿರುವ ಪ್ರತಿಯೊಂದು ಘಟನೆಯೂ 'ಶುಭ' ಮತ್ತು 'ಲಾಭ'ವಾಗಲಿದೆ. ಇದಕ್ಕೆ ಸಾಕ್ಷಿಯೋ ಎನ್ನುವಂತೆ ಮನೆಯಿಂದ ಹೊರಡುತ್ತಿದ್ದಂತೆಯೇ ಆಟೋರಿಕ್ಷಾ, ನಿಲ್ದಾಣಕ್ಕೆ ಬರುತ್ತಿದ್ದಂತೆಯೇ ರೈಲು ಸಿಕ್ಕಿತ್ತು. ಇನ್ನೇನಿದ್ದರೂ ಶುಭ ಪ್ರಯಾಣ, ಧನಾಗಮ, ಸನ್ಮಾನ, ಮಿತ್ರಲಾಭ! ಕಲ್ಪನೆಗಳು ಮನಸ್ಸಿನೊಳಗೆ ಕಚಗುಳಿ ಇಡತೊಡಗಿದ್ದವು. 'ಕಿಸೆಯಲ್ಲಿರುವ ತೆಳ್ಳನೆಯ ಪರ್ಸ್‌ನಲ್ಲಿ ಅಡಗಿ ಕುಳಿತಿರುವ ನೋಟುಗಳು ತನ್ನಿಂತಾನೇ ಹಲವಾರು ಪಟ್ಟು ಹೆಚ್ಚಳವಾಗಿಬಿಟ್ಟಿದ್ದರೆ ಎಷ್ಟು